ಒಂಬತ್ತು ತಿಂಗಳ ಸುದೀರ್ಘವೂ ಘೋರವೂ ಆದ ಚಳಿಗಾಲದಲ್ಲಿ ಮೊಟ್ಟೆಗೆ ಕಾವು ಕೊಡುವ, ಮತ್ತು ಅದನ್ನು ರಕ್ಷಿಸುವ, ಉದ್ದೇಶಸಾಧನೆಗಾಗಿ ಅವು ಹಲವಾರು ತಿಂಗಳು ಆಹಾರವಿಲ್ಲದೆ ಕಳೆಯಬೇಕಾಗುತ್ತದೆ. ಮೊಟ್ಟೆಯೊಡೆದು ಮರಿ ಹೊರಬಂದ ಮೇಲೆ ಉಪವಾಸದ ನಿತ್ರಾಣದಲ್ಲಿಯೂ ಕಂದನಿಗೆ ಆಹಾರ ತರಲು ಮತ್ತೆ ಸಾಗರದವರೆಗಿನ ಪಾದಯಾತ್ರೆ ಆರಂಭ ವಾಗುತ್ತದೆ. ಇವೆಲ್ಲ ಅವಸ್ಥೆಗಳಿಗಿಂತ ಸಾಕ್ಷ್ಯಚಿತ್ರದ ಮುಕ್ತಾಯದ ದೃಶ್ಯವಂತೂ ನನ್ನನ್ನು ಮೂಕವಿಸ್ಮಿತಳನ್ನಾಗಿ ಮಾಡಿತು.

ಪುಟ್ಟ ಮರಿ ತನ್ನನ್ನು ತಾನು ರಕ್ಷಿಸಿಕೊಳ್ಳುವಷ್ಟು, ಜಗತ್ತನ್ನೂ ಜೀವನವನ್ನೂ ಈಗ ಸ್ವತಂತ್ರವಾಗಿ ಎದುರಿಸುವಷ್ಟು ಸಮರ್ಥವಾಗಿ ಬೆಳೆದಿದೆ ಎಂದು ಖಚಿತವಾದ ನಂತರ ಅಪ್ಪ–ಅಮ್ಮ ಮತ್ತು ಮರಿಗಳ ದಾರಿ ಬೇರೆಯಾಗುವ ಕಾಲ ಬರುತ್ತದೆ. ಅದುವರೆಗೂ ತಮ್ಮ ಪ್ರಾಣವನ್ನೇ ಪಣವಾಗಿರಿಸಿ, ರಕ್ಷಿಸಿ ಪೋಷಿಸಿದ ತಮ್ಮ ಕಂದಮ್ಮಗಳನ್ನು ಬಿಟ್ಟು ತಾಯಿ–ತಂದೆ ಪೆಂಗ್ವಿನ್‌ಗಳು ಕಡಲಿನ ಕೊರೆವ ನೀರಿಗೆ ಈಜುಬಿದ್ದು ಒಮ್ಮೆಯೂ ಹಿಂತಿರುಗಿ ನೋಡದೆ, ಮುಂದೆಂದೂ ಸಂಧಿಸ ದಂತಹ ಅಗಲುವಿಕೆಯನ್ನು ಒಪ್ಪಿಕೊಂಡು, ತಮ್ಮ ದಾರಿ ಹಿಡಿಯುತ್ತವೆ. ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸಿ ತಮ್ಮ ಮೂಲ ನೆಲೆಗೆ ಸಹಜ ವಾಗಿ ಹೊರಟುಹೋಗುತ್ತವೆ. ಅಗಲಿ ಹೋಗುತ್ತಿರುವ ಅಪ್ಪ–ಅಮ್ಮಂದಿರನ್ನು ದಡದಲ್ಲಿ ನಿಸ್ಸಹಾಯಕವಾಗಿ ಕ್ಷಣ ಕಾಲ ನಿಂತು ನೋಡುವ ಮರಿಗಳು ಮರುಕ್ಷಣವೇ ತಮ್ಮಷ್ಟಕ್ಕೆ ತಾವೂ ತಣ್ಣಗೆ ಕೊರೆವ ನೀರಿಗೆ ಧುಮುಕಿ ತಮ್ಮ ದಾರಿ ಹಿಡಿಯುತ್ತವೆ. ಸಹಸ್ರಾರು ವರ್ಷಗಳಿಂದ ನಡೆದು ಬಂದಿರುವ ಈ ಜೀವನಚಕ್ರ ಹೀಗೇ ಮುಂದುವರಿಯುತ್ತ ಬಂದಿದೆ.

ಮಾನವರಾದ ನಮಗೆ ಈ ಬಗೆಯ ನಿಃಸ್ವಾರ್ಥ–ನಿಷ್ಕಾಮ ಕರ್ಮದ ಶ್ರದ್ಧೆ ಸಾಧ್ಯವೇ ಎಂದೆನಿಸುತ್ತದೆ. ಪ್ರಕೃತಿಯೆ ಅತ್ಯುತ್ತಮ ಗುರು ಎನ್ನುತ್ತಾರೆ. ಭಗವದ್ಗೀತೆಯಲ್ಲಿ ವಿವರವಾಗಿ ವರ್ಣಿತವಾದ ನಿಷ್ಕಾಮ ಕರ್ಮದ ದರ್ಶನ ನಮಗೆ ಈ ಸಾಕ್ಷ್ಯ ಚಿತ್ರದಲ್ಲಿ ದೊರೆಯಿತು. ಪ್ರಾಯಶಃ ನನ್ನ ಭಾವುಕ ಮನಸ್ಸು ಈ ಬಗೆಯ ರಮ್ಯ ರೂಪಕಗಳಲ್ಲಿ ಕಂಡಿರುವ ಇದೆಲ್ಲ ಅವಾಸ್ತವವೂ ಆಗಿರಬಹುದು.

ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ಈ ಅದ್ಭುತ ಜೀವಿಗಳು ನ್ಯಾಷನಲ್ ಜಿಯೊಗ್ರಫಿಕ್‌ನ ಸೋಜಿಗಗಳಷ್ಟೆ ಅಲ್ಲ, ನಮ್ಮ ಪವಿತ್ರ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಅತ್ಯಂತ ಕ್ಲಿಷ್ಟವೂ, ಅಮೂರ್ತವೂ ಆದ ತತ್ತ್ವಗಳನ್ನು ತಮ್ಮ ಸಹಜವಾದ ಜೀವನ ಶೈಲಿಯಿಂದಲೆ ಬಹು ಸರಳವಾಗಿ ಮತ್ತು ಹೃದ್ಯವಾಗಿ ಮನವರಿಕೆ ಮಾಡಿಕೊಡುವ ಗುರುಗಳೂ ಆಗಿವೆ.

## ಪ್ರಹಸನ ಪ್ರಸಂಗ

**ಚಲನಚಿತ್ರ ನಿರ್ದೇಶಕ** ಈಗ ಈ ಬೆಟ್ಟದ ತುದಿಯಿಂದ ನೀವು ಕೆಳಗೆ ಧುಮುಕಬೇಕು.

**ಗಾಬರಿಗೊಂಡ ನಟ** : ಆಗಲಿ, ಆದರೆ ಹಾಗೆ ಹಾರಿದಾಗ ಅನಾಹುತವಾಗಿ ನಾನು ಸತ್ತರೆ ಅಥವಾ ಗಾಯಗೊಂಡರೆ..

**ನಿರ್ದೇಶಕ** : ಅಯ್ಯೋ, ಯಾಕೆ ಚಿಂತೆ? ಇದೇ ಕಡೆಯ ಸೀನ್ ಕಣ್ರೀ!

✪✪✪

ಪಾದ್ರಿಯೊಬ್ಬರು ತಮ್ಮ ಭಾನುವಾರದ ಧರ್ಮೋಪದೇಶವನ್ನು ಮುಗಿಸಿ ಮನೆಗೆ ತಮ್ಮ ಕಾರಿನಲ್ಲಿ ಹಿಂದಿರುಗುತ್ತಿದ್ದಾಗ ರಸ್ತೆಯ ಬಳಿ ಇದ್ದ ಕಂಬಿಗಳಿಗೆ ಗಾಡಿ ಉಜ್ಜಿ, ಒಂದು ಕಡೆ ಸಂಪೂರ್ಣವಾಗಿ ಹಾಳಾಗಿತ್ತು. ಮನೆಗೆ ಬಂದೊಡನೆ ಅವನ ಸ್ನೇಹಿತ ಕೇಳಿದ, “ನೀನು ಹೊರಟಾಗ ನಿನಗೆ ಮಂಪರು ಬರುವಂತೆ ಇತ್ತೇ?” ಈತ ಹೇಳಿದ, “ಇಲ್ಲ, ಎಚ್ಚರದಿಂದಲೇ ಇದ್ದೆ. ನಾನು ಪ್ರವಚನದಲ್ಲಿ ಹೇಳಿದ್ದ ವಿಚಾರಗಳನ್ನು ಮತ್ತೆ ನೆನಪಿಸಿಕೊಳ್ಳುತ್ತಿದ್ದೆ ಅಷ್ಟೆ...”

✪✪✪

ತೊಂಬತ್ತೈದು ವರ್ಷಗಳ ವೃದ್ಧರೊಬ್ಬರು ತಮ್ಮ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಹಿತೈಷಿಗಳನೇಕರು ಉಡುಗೊರೆಗಳೊಂದಿಗೆ ಬಂದಿದ್ದರು. ಎಲ್ಲರನ್ನೂ ಬರಮಾಡಿಕೊಂಡು ಆತ ಹೇಳಿದ, “ನೋಡಿ, ನನಗೆ ಯಾರೂ ಶತ್ರುಗಳೇ ಇಲ್ಲ. ಇಡೀ ಜಗತ್ತಿನಲ್ಲೇ ಇಲ್ಲ!” ಬಂದಿದ್ದವರು, “ಆಹಾ! ಎಂತಹ ಅದ್ಭುತ ಸಾಧನೆ! ಅದ್ಹೇಗೆ ಸಾಧ್ಯವಾಯಿತು?” ಎಂದು ಆಶ್ಚರ್ಯದಿಂದ ಕೇಳಿದರು. ಈತ ಶಾಂತವಾಗಿ ಹೇಳಿದ, “ಏನಿಲ್ಲ, ಅವರೆಲ್ಲ ಈಗಾಗಲೇ ತೀರಿಕೊಂಡಿದ್ದಾರೆ!”

✪✪✪

ಅಂಗಡಿಯಲ್ಲಿ ದಿನಸಿ ಪದಾರ್ಥಗಳನ್ನು ಕೊಂಡುಕೊಂಡ ನಂತರ ಹಣ ಪಾವತಿ ಮಾಡುವ ಸ್ಥಳದಲ್ಲಿದ್ದ ವ್ಯಕ್ತಿ ಒಂದು ಕೈಯಲ್ಲಿ ಪ್ಲಾಸ್ಟಿಕ್ ಚೀಲವನ್ನು ಹಿಡಿದಿದ್ದ. ಮತ್ತೊಂದು ಕೈಯಲ್ಲಿ ಪೇಪರಿನ ಚೀಲವನ್ನು ಹಿಡಿದಿದ್ದ. ಪದಾರ್ಥಗಳನ್ನು ತುಂಬಿಕೊಳ್ಳಲು ಅವುಗಳನ್ನು ಮುಂದೆ ನೀಡಿ ಹೇಳಿದ, “ಪ್ಲಾಸ್ಟಿಕ್ ಬಳಸಿದರೆ ಅದು ನದಿ, ಸಮುದ್ರವನ್ನು ಸೇರಿ ಮೀನುಗಳು ಉಸಿರುಗಟ್ಟಿ ಸಾಯುವುವು. ಪೇಪರ್ ಉಪಯೋಗಿಸಿದರೆ ಮರಗಿಡಗಳು ಸಾಯುವುವು. ಯಾವುದನ್ನು ಸಾಯಿಸಲು ಬಯಸುವಿರಿ?”